ಕುಂದಾಪುರದಲ್ಲಿ ನೂತನವಾಗಿ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣವನ್ನು ಮಾಡುವ ಕುರಿತು

564 - ಶ್ರೀ ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಂದಾಪುರದಲ್ಲಿ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣವನ್ನು ನೂತನವಾಗಿ ರಚಿಸುವ ಯೋಜನೆ ಸರಕಾರದ ಮುಂದಿದೆಯೇ?

ಆ) ಇದ್ದಲ್ಲಿ, ಬಸ್ ನಿಲ್ದಾಣದ ನಿರ್ಮಾಣಕ್ಕೆ ತಗಲುವ ಅಂದಾಜು ವೆಚ್ಚ ಹಾಗೂ ನಕ್ಷೆಯ ತಯಾರಿಕೆ ಮಾಡಲಾಗಿದೆಯೇ?

ಇ) ಮಾಡಿದ್ದಲ್ಲಿ ಮೇಲಿನ ಕಾರ್ಯವನ್ನು ಎಂದಿನಿಂದ ಕೈಗೊಳ್ಳಲಾಗುವುದು?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಮಂತ್ರಿಗಳು) :

ಅ) ಹೌದು

ಆ) ಭೂಸ್ವಾಧೀನತೆಯ ಕಾರ್ಯವು ಇನ್ನೂ ಪ್ರಗತಿಯಲ್ಲಿರುತ್ತದೆ. ನಿವೇಶನವು ಸ್ವಾಧೀನಕ್ಕೊಳಪಟ್ಟ ಮೇಲೆ ನಕ್ಷೆ ಮತ್ತು ವೆಚ್ಚದ ವಿವರಗಳನ್ನು ತಯಾರು ಮಾಡಲಾಗುವುದು.

ಇ) ಉದ್ಭವಿಸುವುದಿಲ್ಲ.

ವೇತನ ವಿವಿಧ ಬಡ್ತಿಗೆ ಖರ್ಚಾಗುವ ಹಣ ಹಾಗೂ ನೌಕರರ ಸಂಖ್ಯೆ

60-ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ವಿವಿಧ ಇಲಾಖೆಗಳಲ್ಲಿ ಮಂಜೂರಾಗಿರುವ ವಿವಿಧ ಶ್ರೇಣಿಯ ನೌಕರರ ಸಂಖ್ಯೆ ಎಷ್ಟು? ಹಾಗೂ 31-3-1994ರಂದು ಖಾಲಿಯಿದ್ದ ಹುದ್ದೆಗಳ ಸಂಖ್ಯೆ ಎಷ್ಟು?

ಆ) 1992-93, 1993-94 ರಲ್ಲಿ ಎಲ್ಲಾ ವರ್ಗದಸರ್ಕಾರಿ ಅಧಿಕಾರಿ ಹಾಗೂ ನೌಕರರಿಗೆ ಕೊಟ್ಟ ವೇತನ ಭತ್ಯೆ, ಇವರ ಬಡ್ತಿಯ ಮೊತ್ತವೆಷ್ಟು ಹಾಗೂ ನಿವೃತ್ತರಿಗೆ ಕೊಟ್ಟ ನಿವೃತ್ತಿವೇತನ ಭತ್ಯೆ ಎಷ್ಟು

ಇ) 1994-95ರಲ್ಲಿ ಆಯವ್ಯಯದಲ್ಲಿ ನಿಗದಿಪಡಿಸಿರುವ ವೇತನ ಹಾಗೂ ವಿವಿಧ ಭತ್ಯೆ ಎಷ್ಟು?

ಈ) 4ನೇ ವೇತನ ಆಯೋಗದ ಶಿಫಾರಸ್ಸುಗಳನ್ನು ಜಾರಿಗೆ ತಂದಿದೆಯೇ? ತಂದಿದ್ದಲ್ಲಿ ಇದರಿಂದಾಗುವ ಹಣಕಾಸು ಭಾರವೆಷ್ಟು? ಜಾರಿಯಲ್ಲಿ ತರದಿದ್ದ ಪಕ್ಷದಲ್ಲಿ ಇನ್ನೂ ಏಕೆ ತಂದಿಲ್ಲ ಹಾಗೂ ಎಂದು ಜಾರಿಗೆ ತರಲಾಗುವುದು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) :

ಅ) ರಾಜ್ಯದ ವಿವಿಧ ಇಲಾಖೆಗಳಲ್ಲಿ (ಜಿಲ್ಲಾ ಪಂಚಾಯತ್‌ಗಳು ಸೇರಿದಂತೆ) ಮಂಜೂರಾದ ವಿವಿಧ ಶ್ರೇಣಿಯ ಹುದ್ದೆಗಳ ಸಂಖ್ಯೆ 612638ಹಾಗೂ 31-3-1994ರಂದು ಖಾಲಿಯಿದ್ದ ಹುದ್ದೆಗಳ ಸಂಖ್ಯೆ 84022.

ಆ) ಎಲ್ಲಾ ವರ್ಗದ ಸರ್ಕಾರಿ ಅಧಿಕಾರಿ: ನೌಕರರಿಗೆ ಕೊಟ್ಟ ವೇತನ ಭತ್ಯೆಯ ಮೊತ್ತ.

1992-93	170765.25 ಲಕ್ಷ ರೂ.ಗಳು
1993-94	202261.63 ಲಕ್ಷ ರೂ.ಗಳು

ನಿವೃತ್ತರಿಗೆ ಕೊಟ್ಟ ನಿವೃತ್ತಿವೇತನ, ಭತ್ಯೆ